## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ:ಸಿ7(8)ಪ್ರಾ.ಶಿ.ಅ/ಆರ್.ಟಿ.ಇ/ದಾಖಲಾತಿ/473/2015-16 ದಿನಾಂಕ: 17-05-2016

**: : ಸುತ್ತೋಲೆ: :**

ವಿಷಯ: 2016-17 ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯಿದೆಯಡಿ 2 ನೇ ಹಂತದ ಆನ್-ಲೈನ್ ಲಾಟರಿ ಪ್ರಕ್ರಿಯೆಗೆ ಅರ್ಜಿಗಳ ಪರಿಷ್ಕರಣೆಗೆ ಪೋಷಕರಿಗೆ ಸೂಚನೆಗಳು.

ಉಲ್ಲೇಖ: 1. ಈ ಕಛೇರಿಯ ಸುತ್ತೋಲೆ ಸಂಖ್ಯೆ:ಸಿ7(8)ಪ್ರಾಶಿಅ/ಆರ್.ಟಿ.ಇ/473/2015-16 ದಿನಾಂಕ: 07.05.2016.

2. ಈ ಕಛೇರಿಯ ಜ್ಞಾಪನಾಸಂಖ್ಯೆ:ಸಿ7(8)ಪ್ರಾಶಿಅ/ಆರ್.ಟಿ.ಇ/473/2015-16 ದಿನಾಂಕ: 07.05.2016.

3. ಈ ಕಛೇರಿ ಸುತ್ತೋಲೆ ಸಮಸಂಖ್ಯೆ ದಿನಾಂಕ:13-05-2016.

*******

ದಿನಾಂಕ: 07.05.2016 ರಂದು 2016-17 ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯಿದೆಯಡಿ ಪ್ರವೇಶ ಪ್ರಕ್ರಿಯೆಗೆ ಸಂಬಂಧಿಸಿದಂತೆ ಮೊದಲನೇ ಹಂತದ ಆನ್-ಲೈನ್ ಲಾಟರಿ ಪ್ರಕ್ರಿಯೆಯನ್ನು ನಡೆಸಲಾಗಿದ್ದು, ದಿನಾಂಕ: 20.05.2016ರೊಳಗೆ ಸಂಬಂಧಿಸಿದ ಶಾಲೆಗಳಲ್ಲಿ ದಾಖಲಾತಿ ಪಡೆಯಲು ಸೂಚಿಸಲಾಗಿರುತ್ತದೆ. ಮೊದಲ ಹಂತದ ಲಾಟರಿ ಪ್ರಕ್ರಿಯೆಯಲ್ಲಿ ಸೀಟು ಹಂಚಿಕೆಯಾಗದ ಮತ್ತು ಈಗಾಗಲೇ ಸೀಟು ಹಂಚಿಕೆಯಾಗಿದ್ದು, ನೆರೆಹೊರೆಯ ಹೊರಗಿನ ಕಾರಣ ತಿರಸ್ಕರಿಸಲಾಗಿರುವ ಅರ್ಜಿಗಳ ಪೋಷಕರು 2 ನೇ ಹಂತದ ಲಾಟರಿ ಪ್ರಕ್ರಿಯೆಗೆ ಮತ್ತೊಮ್ಮೆ ಅವಕಾಶ ಪಡೆಯಲು ದಿನಾಂಕ:23.05.2016ರೊಳಗೆ ಆನ್‌ಲೈನ್ ತಂತ್ರಾಂಶದಲ್ಲಿ ಅರ್ಜಿಗಳ ಮಾಹಿತಿಯನ್ನು ಪರಿಷ್ಕರಿಸಿ ಅಪ್‌ಡೇಟ್ ಮಾಡಲು ಈ ಮೂಲಕ ತಿಳಿಯಪಡಿಸಲಾಗಿದೆ.

1. ಮೊದಲ ಹಂತದ ಲಾಟರಿ ಪ್ರಕ್ರಿಯೆಯಲ್ಲಿ ಸೀಟು ಹಂಚಿಕೆಯಾಗಿದ್ದು, ನೆರೆಹೊರೆ ಹೊರಗಿನ ಕಾರಣ ಅಥವಾ ದಾಖಲೆಗಳು ತಾಳೆಯಾಗದ ಕಾರಣ ಅವರು ವಾಸವಾಗಿರುವ ವಾರ್ಡ್ ವ್ಯಾಪ್ತಿಯೊಳಗಿನ ಅನುದಾನರಹಿತ ಶಾಲೆಗಳಿಗೆ ಈಗಾಗಲೇ ಸಲ್ಲಿಸಿರುವ ಅರ್ಜಿಯಲ್ಲಿ ಶಾಲೆಗಳ ಆದ್ಯತೆಯನ್ನು ಮತ್ತೊಮ್ಮೆ ಮಾರ್ಪಡಿಸಲು ಅವಕಾಶ ಮಾಡಿಕೊಡಲಾಗಿದೆ.

2. ವಾರ್ಡ್ ವ್ಯಾಪ್ತಿಯ ಹೊರಗಿನ ಶಾಲೆಗಳಿಗೆ ಆರ್.ಟಿ.ಇ ಅಡಿ ಪ್ರವೇಶ ಕೋರಿ ಅರ್ಜಿ ಸಲ್ಲಿಸಿದ್ದಲ್ಲಿ, ಮೊದಲ ಹಂತದಲ್ಲಿ ಸೀಟು ಹಂಚಿಕೆಯಾಗದೇ ಎರಡನೇ ಹಂತದ ಲಾಟರಿ ಪ್ರಕ್ರಿಯೆಗೆ ಅರ್ಹತಾ

ಪಟ್ಟಿಯಲ್ಲಿ ಅರ್ಜಿಯನ್ನು ಪರಿಗಣಿಸಲಾಗಿದ್ದರೂ ಸಹಾ ಅಂತಹ ಪೋಷಕರು ಹಾಲಿ ವಾಸವಿರುವ ಹಾಗೂ ಅಧಿಕೃತ ವಾಸಸ್ಥಳ ದೃಢೀಕರಣ ಪತ್ರ ಹೊಂದಿರುವ, ವಾರ್ಡ್ ವ್ಯಾಪ್ತಿಯೊಳಗಿನ ಅನುದಾನರಹಿತ ಶಾಲೆಗಳಿಗೆ ಪ್ರವೇಶ ಕೋರಿ ಆದ್ಯತೆಯನ್ನು ಮತ್ತೊಮ್ಮೆ ಮಾರ್ಪಡಿಸಲು ಅವಕಾಶ ಮಾಡಿಕೊಡಲಾಗಿದೆ.

(ವಿ.ಪೊನ್ನುರಾಜ್)
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

**ಇವರಿಗೆ ಸೂಕ್ತ ಕ್ರಮಕ್ಕಾಗಿ,**

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಶಿಕ್ಷಣ ನಿಯಂತ್ರಣಾ ಪ್ರಾಧಿಕಾರ.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು .
3. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
4. ಮಹಾನಗರ ಪಾಲಿಕೆಗಳ ಆಯುಕ್ತರು.
5. ಎಲ್ಲಾ ನಗರ ಪಾಲಿಕೆಗಳ ಆಯುಕ್ತರು.
6. ಎಲ್ಲಾ ಪುರಸಭೆ/ಪಟ್ಟಣ ಪಂಚಾಯತ್‌ಗಳ ಮುಖ್ಯಾಧಿಕಾರಿಗಳು.
7. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ).
8. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು.
9. ಕಛೇರಿ ಪ್ರತಿ.